ಅಚಾನಕ್ಕಾಗಿ ಒಬ್ಬ ವ್ಯಕ್ತಿ ಎರಡೂ ಕೈಗಳನ್ನು ಕಳೆದುಕೊಂಡರೆ ಆತನ ಮುಂದಿನ ಬದುಕೇನು? ಇಂತಹ ಸ್ಥಿತಿಯಲ್ಲಿ ಜೀವನವೇ ಮುಗಿಯಿತು ಎಂದು ಮೂಲೆ ಸೇರುತ್ತಾರೆ ಬಹುತೇಕರು. ಇಂಥವರ ಪೈಕಿ, ಸ್ವಾವಲಂಬನೆಯಿಂದ ತಮ್ಮ ಬದುಕನ್ನು ಸುಂದರವಾಗಿಸಿಕೊಂಡಿರುವ ಶುಭಜಿತ್ ಭಟ್ಟಾಚಾರ್ಯ ಅವರ ಕಥೆ ಸ್ಫೂರ್ತಿದಾಯಕವಾಗಿದೆ.

■ **ಶಶಿಕುಮಾರ್ ಸಿ.**
ಚಿತ್ರಗಳು: ಕೃಷ್ಣ ಕುಮಾರ್ ಪಿ.ಎಸ್

# ಕೈಗಳಿಲ್ಲದೆ ಬದುಕು ಕಟ್ಟಿಕೊಂಡ ಕಥನ

ಕರುಣೆ ಬೇಡ—ಅವಕಾಶ ಬೇಕು, ಕನಿಕರ ನಿಲ್ಲಿಸಿ— ಸಮಾನರೆಂದು ಭಾವಿಸಿ, ಸಹಾಯದ ನಿರೀಕ್ಷೆ ಬೇಡ— ಸ್ವಾಭಿಮಾನದ ಬದುಕಷ್ಟೇ ಸಾಕು...

ಐದನೆಯ ವಯಸ್ಸಿನಲ್ಲಿ ವಿದ್ಯುತ್ ಸ್ಪರ್ಶದಿಂದ ಆಕಸ್ಮಿಕವಾಗಿ ತಮ್ಮ ಎರಡೂ ಕೈಗಳನ್ನು ಕಳೆದುಕೊಂಡ ಪಶ್ಚಿಮ ಬಂಗಾಳ ಮೂಲದ, ಬೆಂಗಳೂರು ವಾಸಿ ಶುಭಜಿತ್ ಭಟ್ಟಾಚಾರ್ಯ ನೇರ ನುಡಿಗಳಿವು. ಅವರ ಈ ಮಾತುಗಳು ಸಮಾಜ ಅಂಗವಿಕಲರನ್ನು ಹೇಗೆ ನೋಡಬೇಕು ಮತ್ತು ಅಂಗವಿಕಲರು ಹೇಗೆ ಬದುಕು ಕಟ್ಟಿಕೊಳ್ಳಬೇಕು ಎಂಬುದನ್ನು ಹೇಳುತ್ತವೆ.

ಹುಟ್ಟು ಅಂಗವಿಕಲರು ಹಾಗೂ ದುರ್ಘಟನೆಗಳಿಗೆ ಈಡಾಗಿ ದೈಹಿಕ ನ್ಯೂನತೆಗೆ ಒಳಗಾದವರ ಮನಸ್ಥಿತಿ ಬದಲಿಸಲು ಪಣತೊಟ್ಟಿರುವ ಶುಭಜಿತ್ ಅವರ ಬದುಕೇ ಸ್ಫೂರ್ತಿದಾಯಕ.

ತನ್ನಂತೆಯೇ ದೈಹಿಕ ನ್ಯೂನತೆ ಹೊಂದಿದವರಲ್ಲಿ ಸ್ವಾಭಿಮಾನದ ಬೀಜ ಬಿತ್ತುವ ಮೂಲಕ ಯಾರ ನೆರವಿಲ್ಲದೆಯೇ ಬದುಕು ಕಟ್ಟಿಕೊಳ್ಳಲು ಸಹಾಯ ಹಸ್ತ ಚಾಚುತ್ತಿದ್ದಾರೆ.

## ಸಮಾಜದ ಮನಸ್ಥಿತಿ ಬದಲಾಗಬೇಕು

ಅಂಗವಿಕಲರಿಗೆ ಎಲ್ಲ ಸಮಯದಲ್ಲೂ ಮತ್ತೊಬ್ಬರ ಸಹಾಯ ಅಗತ್ಯ ಎನ್ನುವ ಸಮಾಜದ ಮನಸ್ಥಿತಿಯನ್ನು ಟೀಕಿಸುವ ಶುಭಜಿತ್, 'ನನ್ನಂತೆಯೇ ಅಂಗವೈಕಲ್ಯದಿಂದ



ಎರಡೂ ಕೈಗಳನ್ನು ಕಳೆದುಕೊಂಡಿದ್ದರೂ ಕಾರು ಚಾಲನೆ ಮಾಡುತ್ತಿರುವ ಶುಭಜಿತ್ ಭಟ್ಟಾಚಾರ್ಯ